ಒಂದು ಕಾಲಕ್ಕೆ ನಮ್ಮ ಮನೆಯಲೊಂದು ಚೆಂದವಾದ ಸೈಕಲ್ಲಿತ್ತು. ಅದನ್ನು ನನ್ನ ಮೊದಲ ಸ್ವಯಾರ್ಜಿತ ಹಣದಲ್ಲಿ ಖರೀದಿಸಿ ಮನೆದುಂಬಿಸಿದ್ದೆನಾಗಿ ಅದರ ಮೇಲೆ ಸ್ವಾವಲಂಬನೆ, ಸ್ವಾತಂತ್ರ್ಯಗಳ ಠಸ್ಸೆಗಳಿದ್ದವು. ಅದು ನನ್ನನ್ನು ಪೇಟೆಗೂ ಕಾಲೇಜಿಗೂ ಕರೆದೊಯ್ಯುವ ಸಂಗಾತಿಯಾಗಿತ್ತು; ಮಾತ್ರವಲ್ಲ, ಬೀದಿಯ ಕಾಯಿಲೆದಾರರನ್ನು ದವಾಖಾನೆಗೊಯ್ಯಲು ಆಂಬುಲೆನ್ಸಾಗಿಯೂ, ಊರಿಂದ ಬರುತ್ತಿದ್ದ ಅಪ್ಪನನ್ನು ಬಸ್ಸಿಗೆ ಹತ್ತಿಸಿಬರಲು ಆಟೋರಿಕ್ಷಾವಾಗಿಯೂ, ಅಂಗಡಿಯಿಂದ ದಿನಸಿ ತರುವಾಗ ಬಂಡಿಯಾಗಿಯೂ ರೂಪಾಂತರ ಪಡೆಯುತ್ತಿತ್ತು. ಅದೆಷ್ಟು ಬಾರಿ ಮದುವೆಯಾದ ಹೊಸತರಲ್ಲಿ ನಾನೂ ಬಾನೂ ಅದರ ಮೇಲೆ ಸಿನಿಮಾಕ್ಕೆ ಹೋಗಿದ್ದೇವೆ! ಸಂಜೆಹೊತ್ತು ಊರಹೊರಗಿನ ಹೊಲಗದ್ದೆ ಬಯಲಿಗೆ ಹೋಗಿ ಕುಳಿತು, ಅಸ್ತಮಿಸುವ ಸೂರ್ಯನನ್ನು ಗೂಡು ಸೇರುತ್ತಿರುವ ಹಕ್ಕಿಗಳನ್ನು ನೋಡುತ್ತ ಆನಂದಿಸಿದ್ದೇವೆ! ಲೋಕದ ಕಣ್ಣಲ್ಲಿ ನಮ್ಮದು ಆದರ್ಶ ಸಂಸಾರವೆನಿಸಿದ್ದರೆ ಅದಕ್ಕೆ ಸೈಕಲ್ಲೇ ಕಾರಣವಾಗಿತ್ತು.

ಹೀಗೆ ಸಮಸ್ತ ಕುಟುಂಬವನ್ನು ಪೊರೆಯುವ ಚೈತನ್ಯವಾಗಿದ್ದ ಸದರಿ ವಾಹನವು, ಕೊಟ್ಟಿಗೆಗೆ ನುಗ್ಗಿದ ಚಿರತೆಯಂತೆ ಶೋರೂಮಿನಿಂದ ಬಂದ ಒಂದು ಸ್ಕೂಟರಿನ ದೆಸೆಯಿಂದ, ಎಸ್ಸೆಸ್ಸೆಲ್ಸಿ ನಪಾಸಾದ ಗ್ರಾಮೀಣ ವಿದ್ಯಾರ್ಥಿಯಂತೆ ಮಂಕಾಗಿ ಮೂಲೆಸೇರಿತು. ಹಾಗೆ ನೋಡಿದರೆ, ಸೈಕಲ್ಲಿನ ಆಧಾರದಲ್ಲೇ ವಿವಿಧ ಬೈಕು ಸ್ಕೂಟರು ಕಾರು ವಿಕಾಸಗೊಂಡವು; 'ಮೋಟರ್ ಸೈಕಲ್' ಹೆಸರಲ್ಲಿ

